ಪಟ್ಟು ಅವನ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿದ್ದು ಅಖ್ತರನನ್ನು ಅಲ್ಲಾಡಿಸಿಬಿಟ್ಟಿತ್ತು. ಅಷ್ಟೇ ಅಲ್ಲ, ಬದಲಿಗೆ ಅವನ ತಪಾಸಣೆಗೆಂದು ಬಂದಿದ್ದ ಅಧಿಕಾರಿಗಳು 'ಪೋಷಾಕನ್ನು 'ನಾರ್ಮಲ್' ಆಗಿರುವಂತೆ ಧರಿಸಿ, ಧಾರ್ಮಿಕತೆಯನ್ನು ಖಾಸಗಿಯಾಗಿರಿಸಿಕೊಳ್ಳಬೇಕೆಂದು' ಅವನಿಗೆ ನೀಡಿದ ಸಲಹೆಯಿಂದಾಗಿ ಅವನಲ್ಲಿ ಕೆಲವು ಮೂಲಭೂತ ಪ್ರಶ್ನೆಗಳು ಉದ್ಭವಿಸಿದ್ದವು.

ಆ ನಂತರ ಅಖ್ತರ ಯೋಚಿಸಿದ್ದ. ತನ್ನ ನಂಬಿಕೆ ತನ್ನದು. ಪೋಷಾಕೂ ತನ್ನದೇ ಆಯ್ಕೆ. ಅದನ್ನು ಬದಲಾಯಿಸುವುದರಿಂದ ಅಂತರಂಗದ ಬದಲಾವಣೆಯಾಗುವುದಿಲ್ಲ. ಆದರೆ ಅದು ಜನರಿಗೆ ಬೇರೇನೊ ಸೂಚನೆಯನ್ನು ಕೊಡುತ್ತದೆ. ಅದು ತನ್ನ ತೊಂದರೆಯೋ, ಅಥವಾ ಸೂಚನೆಯನ್ನು ಗ್ರಹಿಸುವ ಜನರ ತೊಂದರೆಯೋ. ತಾನು ಬದಲಾಗಬೇಕೋ, ಅಥವಾ ಜನರು ತನ್ನನ್ನು ನೋಡಬಹುದಾದ ರೀತಿಯನ್ನು ಬದಲಾಯಿಸಬೇಕೋ... ಈ ದ್ವಂದ್ವದಲ್ಲಿ ಸ್ವಲ್ಪ ಸಮಯ ಕಳೆದ. ಹಜ್ ಮುಗಿಸಿ ಬಂದನಂತರ ಕೆಲವು ರಿವಾಜುಗಳನ್ನು ಅಖ್ತರ ಮೈಗೂಡಿಸಿಕೊಂಡಿದ್ದ. ಹೀಗಾಗಿ ಅವುಗಳನ್ನು ಬಿಟ್ಟುಕೊಡುವುದರಲ್ಲಿ ಅರ್ಥವಿರಲಿಲ್ಲ.

ಆದರೆ ಅವನ ಬಗೆಗಿನ ಗೊಂದಲವುಂಟಾಗುತ್ತಿದ್ದುದು ಹೊಸಬರು, ಅಪರಿಚಿತರು ಅವನನ್ನು ಕಂಡಾಗ ಮಾತ್ರ. ತನ್ನಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದೇ ಅಂತರ್ಮುಖಿಯಾಗಿದ್ದರೆ ಈ ಘರ್ಷಣೆಯನ್ನೂ ಕಡಿಮೆ ಮಾಡಬಹುದು ಎಂದುಕೊಂಡ. ಹೀಗೆ ಅವನ ವಿರೋಧಾಭಾಸಗಳಿಗೆ ಪೂರಕವಾಗಿ ಸಾರ್ವಜನಿಕತ್ವವನ್ನು ತೆಗೆದು (ಮೊದಲೇ ಅಂತರ್ಮುಖಿಯಾಗಿದ್ದ) ತನ್ನ ವ್ಯಕ್ತಿತ್ವಕ್ಕೆ ಇನ್ನಷ್ಟು ಖಾಸಗೀತನವನ್ನು ಸೇರಿಸಲು ನಿರ್ಧರಿಸಿದ್ದ.

ಮೊದಲಿಗೇ ಹೆಚ್ಚು ಸಾರ್ವಜನಿಕವಲ್ಲದ ಅಖ್ತರನ ವ್ಯಕ್ತಿತ್ವ ಸಾಮಾಜಿಕ ಜಾಲತಾಣದಲ್ಲಿ ತುಸು ಮಟ್ಟಿಗೆ ಮಾತ್ರವಿತ್ತು. ಆದರೆ ಅವನ ವ್ಯಾಪಾರಕ್ಕೂ ವ್ಯವಹಾರಕ್ಕೂ ಅದು ಬೇಕಿಲ್ಲ ಎಂದು ಅಖ್ತರನಿಗೆ ಅನ್ನಿಸತೊಡಗಿತ್ತು. ಅಹಮದಾಬಾದಿನಲ್ಲಿ ವಿಚಾರಣೆಗೆ ಬಂದಿದ್ದ ಅಧಿಕಾರಿಗಳ ಬಳಿ ಅವನೇ ಊಹಿಸಲಾಗದಷ್ಟು ಮಾಹಿತಿಯಿದ್ದಂತಿತ್ತು. ಕೆಲವಷ್ಟು ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಿಂದಲೂ ಸಂಗ್ರಹಿಸಿದ್ದರು. ಒಂದಿಷ್ಟು ಮಾಹಿತಿಯನ್ನು ಅವನ ಸಂಪರ್ಕದಲ್ಲಿದ್ದ ಜನರಿಂದ ಸಂಗ್ರಹಿಸಿದ್ದರು. ಆ ಮಾಹಿತಿಯಲ್ಲಿ ಅಪಾಯಕಾರಿಯಾದದ್ದು ಏನೂ ಇಲ್ಲವಾದರೂ ಅವನ ದಿರಿಸು–ರಿವಾಜುಗಳನ್ನಿಟ್ಟು ಒಂದು ರೀತಿಯ ವ್ಯಕ್ತಿತ್ವವನ್ನು ಸಾರ್ವಜನಿಕವಾಗಿ ಕಟ್ಟಿಕೊಡಲು ಸಾಧ್ಯವಿತ್ತು.

ಹಲವು ವರ್ಷಗಳ ಹಿಂದೆ ಅಖ್ತರ ಹಜ್ ಯಾತ್ರೆಯನ್ನು ಕೈಗೊಂಡಿದ್ದ. ಅದಾದ ನಂತರ ಹಾಜಿ ಅಖ್ತರ್ ಆದವನು ದಿನಕ್ಕೈದು ಬಾರಿ ನಮಾಜು ಮಾಡುತ್ತಿದ್ದ. ತಲೆಗೆ ಕುಸುರಿ ಟೋಪಿ ಧರಿಸುತ್ತಿದ್ದ. ಮೀಸೆಯಿಲ್ಲದೇ ಗಡ್ಡ ಬಿಟ್ಟಿದ್ದ. ಹಣೆಯ ಮೇಲೆ ನಮಾಜಿನ ಗುರುತಿತ್ತು. ಮತ್ತು ಅವನು ತನ್ನ ಮತಕ್ಕೆ ಹೊಂದುವಂತಹ ಪೋಷಾಕನ್ನೂ ಧರಿಸುತ್ತಿದ್ದ. ಭಾರತ ಸಂಜಾತ – ಕೀನ್ಯಾ ಪಾಸ್‌ಪೋರ್ಟು ಹೊಂದಿದ್ದ ಈ ಕಚ್ಛೀ ಮುಸಲ್ಮಾನನಿಗೆ ಈಗ ಈ ಜಗತ್ತಿನಲ್ಲಿ ಪ್ರಯಾಣ ಮಾಡುವುದು ಸರಳವಾದ ಮಾತೇನೂ ಆಗಿರಲಿಲ್ಲ. ತನ್ನ ವ್ಯಾಪಾರಿ ಸಂಬಂಧವಿರುವ ಗುಜರಾತಿಗೆ ಹೋಗುವುದೂ ಉಲ್ಲಾಸಮಯ ಅನುಭವವೇನೂ ಆಗಿರಲಿಲ್ಲವಾದ್ದರಿಂದ, ಅವನು ಎಲ್ಲವನ್ನೂ ಸ್ಕೈಪಿನ ಮೂಲಕವೇ ನಿಭಾಯಿಸುವುದನ್ನು ಮೈಗೂಡಿಸಿಕೊಂಡಿದ್ದ.

ಸಮಾಜದ ಅಂತರಂಗದಲ್ಲಿರುವ ರೂಢಿಗತ ಪಡಿಯಚ್ಚಿನಲ್ಲಿ ಅವನನ್ನು ಸೇರಿಸುವುದು ಸುಲಭವಾಗಿತ್ತು. ಒಟ್ಟಾರೆ ಸಾಂಪ್ರದಾಯಿಕ–ಧಾರ್ಮಿಕ ಮುಸಲ್ಮಾನರಿಗೂ ಉಗ್ರಗಾಮಿಗಳಿಗೂ ಸಾಮಾಜಿಕ ಸ್ಮೃತಿಪಟಲದಲ್ಲಿರುವ ಪಡಿಯಚ್ಚಿನಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುತ್ತಿರಲಿಲ್ಲ. ಬಹುಶಃ ಈ ಪಡಿಯಚ್ಚಿನಲ್ಲಿ ಉಗ್ರಗಾಮಿಗಳ ಕೈಗೆ ಒಂದು ಬಂದೂಕನ್ನು ಸಿಕ್ಕಿಸಿಬಿಡುವ ಒಂದೇ